ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 03-02-2016

## ಪತ್ರಿಕಾ ಪ್ರಕಟಣೆ

## ಕಲಾಶ್ರೀ ಪ್ರಶಸ್ತಿಗೆ ಆಯ್ಕೆ ಶಿಬಿರ

ಬೆಂಗಳೂರು, ಫೆಬ್ರವರಿ 3 (ಕರ್ನಾಟಕ ವಾರ್ತೆ)

ಬೆಂಗಳೂರು ಬಾಲಭವನ ಸೊಸೈಟಿಯು ಮಕ್ಕಳಿಗಾಗಿ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದ್ದು, ರಾಜ್ಯ ಮಟ್ಟದ ಕಲಾಶ್ರೀ ಪ್ರಶಸ್ತಿಗಾಗಿ ಸೃಜನಾತ್ಮಕ ಮತ್ತು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಆಯ್ಕೆ ಶಿಬಿರವನ್ನು ನಡೆಸಲಿದೆ. ಸೃಜನಾತ್ಮಕ ಪ್ರದರ್ಶನ ಕಲೆ, ವಿಜ್ಞಾನದಲ್ಲಿ ನೂತನ ಅವಿಷ್ಕಾರ, ಸೃಜನಾತ್ಮಕ ಕಲೆ ಹಾಗೂ ಸೃಜನಾತ್ಮಕ ಬರವಣಿಗೆ ಪ್ರಕಾರಗಳಲ್ಲಿ ಬೆಂಗಳೂರು ನಗರದ ಮಕ್ಕಳಿಗಾಗಿ ಫೆಬ್ರವರಿ 7 ರಂದು ಬೆಳಿಗ್ಗೆ 10-00 ಗಂಟೆಯಿಂದ ಆಯ್ಕೆ ಶಿಬಿರ ನಡೆಯಲಿದೆ.

ಭಾಗವಹಿಸುವ ಮಕ್ಕಳು ನಿಗದಿತ ಸಮಯಕ್ಕೆ ಅರ್ಧ ಗಂಟೆ ಮುಂಚಿತವಾಗಿ ಹಾಜರಿರಬೇಕು. ಮೇಲ್ಕಂಡ ಪ್ರಕಾರಗಳಲ್ಲಿ ಪ್ರಾವಿಣ್ಯತೆ ಹೊಂದಿರುವ 9 ರಿಂದ 16 ವರ್ಷದ ಮಕ್ಕಳ ಸ್ಥಳೀಯ ಮಟ್ಟದ ಆಯ್ಕೆ ವಿಭಾಗದಲ್ಲಿ ಪಾಲ್ಗೊಂಡು ಆಯ್ಕೆಯಾದಲ್ಲಿ ರಾಜ್ಯಮಟ್ಟದ ಶಿಬಿರದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು.

ಹೆಚ್ಚಿನ ವಿವರ ಹಾಗೂ ನೋಂದಣಿಗಾಗಿ ಬೆಂಗಳೂರು ಬಾಲಭವನ ಸೊಸೈಟಿಯ ಕಾರ್ಯದರ್ಶಿಗಳ ಕಚೇರಿಯಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 22864189/22861423 ಮೂಲಕ ಸಂಪರ್ಕಿಸಬಹುದಾಗಿದೆ. ವಿವರಗಳಿಗೆ ಕಚೇರಿ ಅಂತರ್ಜಾಲ www.jawaharbalbhavan.com ಮಿಂಚಂಚೆ secybalbhavan.bng@gmail.com. ನೋಡಬಹುದು.

ಬಾಬು:ಜಿಪಿಆರ್.

# ವಿವಿಧ ಪ್ರಶಸ್ತಿಗಳಿಗೆ ಆಯ್ಕೆ ಸಮಿತಿ

ಬೆಂಗಳೂರು, ಫೆಬ್ರವರಿ 3 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರವು ಸಾಂಸ್ಕೃತಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಹಾಗೂ ನಾಡು ನುಡಿಗೆ ಅತ್ಯುತ್ತಮ ಕೊಡುಗೆ ನೀಡಿದ ಸಾಹಿತಿ/ಕಲಾವಿದರು/ವಿದ್ವಾಂಸರು/ಗಣ್ಯರನ್ನು ಗುರುತಿಸಿ ಪ್ರತಿ ವರ್ಷ ಪ್ರಶಸ್ತಿ ನೀಡುತ್ತಿದೆ. 2015ನೇ ಸಾಲಿಗೆ ನೀಡಲಾಗುವ ಪ್ರಶಸ್ತಿಗಳಿಗೆ ಗಣ್ಯರನ್ನು ಆಯ್ಕೆಮಾಡಲು ಕೆಳಕಂಡ ಆಯ್ಕೆ ಸಮಿತಿಗಳನ್ನು ರಚಿಸಿದೆ.

**ಬಸವ ರಾಷ್ಟ್ರೀಯ ಪ್ರಶಸ್ತಿ:**

ಸಿದ್ದರಾಮ ಬೆಲ್ದಾಳ ಶರಣರು, ಬೀದರ್ – ಅಧ್ಯಕ್ಷರು, ಅಥಣಿಯ ಬಿ.ಎಲ್. ಪಾಟೀಲ್, ಕಲಬುರಗಿಯ ಡಾ. ಜಯಶ್ರೀ ದಂಡೆ, ಬೆಂಗಳೂರಿನ ಡಾ, ಸಿ. ವೀರಣ್ಣ, ಧಾರವಾಡದ ಡಾ. ವೀರಣ್ಣ ರಾಜೂರು, ಉಡುಪಿಯ ಕಾಂತಾವರದ ಡಾ. ನಾ. ಮೊಗಸಾಲೆ ಸದಸ್ಯರಾಗಿದ್ದಾರೆ.

**ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ:**

ಬೆಂಗಳೂರಿನ ರಾಜಶೇಖರ ಮನ್ಸೂರ್ – ಅಧ್ಯಕ್ಷರು, ಉತ್ತರ ಕನ್ನಡದ ಗಣಪತಿ ಭಟ್ ಹಸಣಗಿ, ಕಲಬುರಗಿಯ ಫಕಿರೇಶ್ ಕಣವಿ, ಧಾರವಾಡದ ಶೇಖ್ ಅಬ್ದುಲ್ ಖಾಜಿ, ಬೆಂಗಳೂರಿನ ಮೈಸೂರು ವಿ. ಸುಬ್ರಹ್ಮಣ್ಯ, ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರು ಸದಸ್ಯರಾಗಿದ್ದಾರೆ.

**ಜಾನಪದಶ್ರೀ ಪ್ರಶಸ್ತಿ:**

ಮೈಸೂರಿನ ಹಿ.ಶಿ. ರಾಮಚಂದ್ರೇಗೌಡ – ಅಧ್ಯಕ್ಷರು, ಶಿವಮೊಗ್ಗದ ಬಸವರಾಜ ನೆಲ್ಲಿಸರ, ಬೆಂಗಳೂರಿನ ಡಾ. ಚಕ್ಕೆರೆ ಶಿವಶಂಕರ್, ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ ಶ್ರೀಪಾದ ಶೆಟ್ಟಿ, ಕಲಬುರಗಿಯ ಶ್ರೀಮತಿ ಶಕುಂತಲಾ ದೇವಲಾ ನಾಯಕ್, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

**ಶಾಂತಲಾ ನಾಟ್ಯ ಪ್ರಶಸ್ತಿ:**

ತುಮಕೂರಿನ ಕೆ. ಎಂ. ರಾಮನ್ – ಅಧ್ಯಕ್ಷರು, ಬಳ್ಳಾರಿಯ ಜಿಲಾನಿ ಬಾಷಾ, ಶಿವಮೊಗ್ಗದ ಶ್ರೀಮತಿ ಗೀತಾದಾತಾರ್, ಮೈಸೂರಿನ ಶ್ರೀಮತಿ ಶಾಂತಲಾ ವಟ್ಟಂ, ಬೆಂಗಳೂರಿನ ಡಾ. ಚೂಡಮಣಿ ನಂದಗೋಪಾಲ್ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

**ರಂಗಭೂಮಿ ವಿಭಾಗ ಪ್ರಶಸ್ತಿ:**

ಬಳ್ಳಾರಿಯ ವೃತಿರಂಗಭೂಮಿಗೆ ಸೇರಿದ ಶ್ರೀಮತಿ ಸುಭದ್ರಮ್ಮ ಮನ್ಸೂರ್ – ಅಧ್ಯಕ್ಷರು, ಹಗ್ಗೋಡಿನ ಹವ್ಯಾಸಿ ರಂಗಭೂಮಿಗೆ ಸೇರಿದ ಡಾ. ಕೆ. ವಿ. ಅಕ್ಷರ, ವೃತ್ತಿ ರಂಗಭೂಮಿಗೆ ಸೇರಿದ ಶ್ರೀಮತಿ ಮಾಲತಿ ಸುಧೀರ್, ಗದಗದ ಫಕೀರಪ್ಪ ವರವಿ, ಇಳಕಲ್‌ನ ಮಾಹಾಂತೇಶ ಗಜೇಂದ್ರಗಢ, ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರು, ಧಾರವಾಡದ ಕರ್ನಾಟಕ ನಾಟಕ ರಂಗಾಯಣ ನಿರ್ದೇಶಕರು ಸದಸ್ಯರಾಗಿರುತ್ತಾರೆ.

**ಲಲಿತಕಲಾ ವಿಭಾಗದ ಪ್ರಶಸ್ತಿ:**

ಬಳ್ಳಾರಿ ಜಿಲ್ಲೆಯ ಸಂಡೂರಿನ ವಿ.ಟಿ. ಕಾಳೆ – ಅಧ್ಯಕ್ಷರು ಚಿತ್ರ ಕಲಾವಿದರಾದ ಹುಬ್ಬಳ್ಳಿಯ ಸಿ.ಡಿ. ಜಟ್ಟಣ್ಣನವರ್, ಮಂಗಳೂರಿನ ಗಣೇಶ್ ಸೋಮಾಯಾಜಿ, ಶಿಲ್ಪ ಕಲಾವಿದರಾದ ಕಲಬುರಗಿಯ ಚಂದ್ರಶೇಖರ್ ವೈ . ಶಿಲ್ಪಿ, ಬೆಂಗಳೂರಿನ ಪ್ರಧಾನಿ ನಾಗಪ್ಪ, ಕರ್ನಾಟಕ ಲಲತಕಲಾ ಅಕಾಡೆಮಿಯ ಅಧ್ಯಕ್ಷರು ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

**ಸಂಗೀತ ವಿಭಾಗದ ಪ್ರಶಸ್ತಿ:**

ಬೆಂಗಳೂರಿನ ಆರ್. ಕೆ. ಪದ್ಮನಾಭ – ಅಧ್ಯಕ್ಷರು, ಬೆಂಗಳೂರಿನ ಎಂ.ಎಸ್. ಶೀಲಾ, ಮೈಸೂರಿನ ಡಾ. ಆರ್.ಎನ್. ಶ್ರೀಲತಾ, ಧಾರವಾಡದ ಜಯದೇವಿ ಜಂಗಮ ಶೆಟ್ಟಿ, ದಕ್ಷಿಣ ಕನ್ನಡದ ಪುತ್ತೂರು ನರಸಿಂಹ ನಾಯಕ್, ವಿಜಯಪುರದ ಶ್ರೀಮತಿ ಲತಾ ಜಹಗೀರದಾರ್, ಬೆಂಗಳೂರಿನ ಎ.ವಿ. ಪ್ರಸನ್ನ, ಕೋಲಾರದ ಶ್ರೀಮತಿ ರೇಣುಕಾ ರಾಮರಾವ್, ಬೆಂಗಳೂರಿನ ತಿರುಮಲೆ ಶ್ರೀನಿವಾಸ್, ಕಲಬುರಗಿಯ ರೇವಯ್ಯ ವಸ್ತ್ರದ ಮಠ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

ಮೇಲ್ಕಂಡ ಎಲ್ಲಾ ಏಳು ಆಯ್ಕೆ ಸಮಿತಿಗಳಿಗೆ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ಬಾಬು:ಜಿಪಿಆರ್.

# ಆಕಾಶವಾಣಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಪಾಠ

ಬೆಂಗಳೂರು, ಫೆಬ್ರವರಿ 3 (ಕರ್ನಾಟಕ ವಾರ್ತೆ)

2015-16 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಮಾರ್ಚ್ ಅಂತ್ಯದಲ್ಲಿ ಪ್ರಾರಂಭವಾಗುತ್ತಿರುವ ಹಿನ್ನಲೆಯಲ್ಲಿ ಆಕಾಶವಾಣಿ ರಾಜ್ಯದ 13 ಕೇಂದ್ರಗಳ ಮುಖಾಂತರ ಸೋಮವಾರದಿಂದ ಶುಕ್ರವಾರದವರೆಗೆ ಶಾಲಾ ಅವಧಿಯಲ್ಲಿ ಪರೀಕ್ಷಾ ಸಿದ್ಧಥೆ ಸರಣಿಯನ್ನು ಹಸ್ತಾಂತರಿಸಲಿದೆ. ಈ ಸರಣಿಯಲ್ಲಿ ವಿಷಯ ಪರಿಣಿತರು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳೀಗೆ ಕೊನೆಯ ಹಂತದಲ್ಲಿ ಹೇಗೆ ಸಿದ್ಧರಾಗಬೇಕು ಶಿಕ್ಷಕರು ಹೇಗೆ ಮಾರ್ಗದರ್ಶನ ನೀಡಬೇಕು ಎನ್ನುವ ಕುರಿತು ಮಾಹಿತಿ ನೀಡುತ್ತಾರೆ. ಈ ಸರಣಿ ಮಧ್ಯಾಹ್ನ 2-35 ರಿಂದ 3-05 ರವರೆಗೆ ಪ್ರಸಾರವಾಗಲಿದೆ.

ಶಾಲಾ ಅವಧಿಯಲ್ಲಿ ಪ್ರಸಾರವಾಗುವ ಈ ಎಲ್ಲಾ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸದುಪಯೋಗಪಡಿಸಿಕೊಳ್ಳಲು ಕೋರಿದೆ.

ಬಾಬು:ಜಿಪಿಆರ್.

# ರಾಜ್ಯದಲ್ಲಿ ಏಪ್ರಿಲ್ 2016ರ ಅಂತ್ಯಕ್ಕೆ ಗ್ರಾಮೀಣ ಪ್ರದೇಶದ 1.5 ಕೋಟಿ ಜನರಿಗೆ ಶುದ್ಧ ಕುಡಿಯುವ ನೀರು

ಬೆಂಗಳೂರು, ಫೆಬ್ರವರಿ 3 (ಕರ್ನಾಟಕ ವಾರ್ತೆ)ಕರ್ನಾಟಕ ಸರ್ಕಾರವು ಬರುವ ಏಪ್ರಿಲ್ ಅಂತ್ಯಕ್ಕೆ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ 1.5 ಕೋಟಿ ಜನರಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಮೂಲಕ ರಾಷ್ಟ್ರದಲ್ಲಿಯೇ ದಾಖಲೆಯಾದ ಸಾಧನೆ ಮಾಡಲಿದೆಯೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್ ಅವರು ಹೇಳಿದ್ದಾರೆ.

ನವದೆಹಲಿಯ ವಿಜ್ಞಾನ ಭವನದಲ್ಲಿ ಇಂದು ನಡೆದ ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ ಕುರಿತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರುಗಳ ಸಭೆಯಲ್ಲಿ ಮಾತನಾಡಿದ ಅವರು, 2013–14 ನೇ ಸಾಲಿನಲ್ಲಿ 1,000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದ್ದು, ಈ ಆರ್ಥಿಕ ವರ್ಷದ ಅಂತ್ಯಕ್ಕೆ 7,000 ಘಟಕಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆಯೆಂದು ತಿಳಿಸಿದರು.

ನೀರು ಅಮೂಲ್ಯ, ನೀರು ಇದ್ದಲ್ಲಿ ನೈರ್ಮಲ್ಯ ಇರುತ್ತದೆ. ಶುದ್ಧ ಕುಡಿಯುವ ನೀರು ಜೀವನದ ಆಧಾರ ಆದರೆ, ಇಂದು ನೀರು ಕಲುಷಿತವಾಗಿದೆ. ಇದರಿಂದ ಬರುವ ರೋಗಗಳಿಂದಾಗಿ ವ್ಯಕ್ತಿ ದೈಹಿಕವಾಗಿ ಮತ್ತು ಆರ್ಥಿಕವಾಗಿ ಜರ್ಜರಿತನಾಗುತ್ತಿದ್ದಾನೆ. ಶುದ್ಧ ಕುಡಿಯುವ ನೀರು ಶ್ರೀಸಾಮಾನ್ಯನ ಹಕ್ಕಾಗಬೇಕು. ಉಳ್ಳವರು ಕುಡಿಯುವ ಗುಣಮಟ್ಟದಷ್ಟೇ ನೀರು ಸಾಮಾನ್ಯ ಜನರಿಗೆ ಲಭ್ಯವಾಗಬೇಕು. ಇದು ಕರ್ನಾಟಕ ಸರ್ಕಾರದ ಬದ್ಧತೆಯಾಗಿದ್ದು, ಅದಕ್ಕಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಹಂತ ಹಂತವಾಗಿ ಈ ಸೌಲಭ್ಯವನ್ನು ರಾಜ್ಯಾದ್ಯಂತ ವಿಸ್ತರಿಸಲು ರಾಜ್ಯ ಸರ್ಕಾರವು ಸಂಕಲ್ಪ ಮಾಡಿದೆ ಎಂದು ಅವರು ಹೇಳಿದರು.

ಸಧ್ಯದ ಪರಿಸ್ಥಿತಿಯಲ್ಲಿ ಮೇಲ್ಮೈ ಜಲ ಮೂಲ ಲಭ್ಯತೆ ಇರುವ ನದಿ, ಕಾಲುವೆ, ಕೆರೆಗಳನ್ನು ಉಪಯೋಗಿಸಿಕೊಂಡು ಅವುಗಳ ನೀರನ್ನು ಶುದ್ಧೀಕರಿಸಿ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದು ಅನಿವಾರ್ಯವಾಗಿದೆ. ಕರ್ನಾಟಕ ಸರ್ಕಾರವು ಮೇಲ್ಮೈ ಜಲ ಮೂಲದ ಲಭ್ಯತೆಯಿಂದ ಕುಡಿಯುವ ನೀರು ಪೂರೈಸುವ ಕುರಿತು ಸಮೀಕ್ಷೆಯೊಂದನ್ನು ಕೈಗೊಂಡಿದೆ. ರಾಜ್ಯದಲ್ಲಿರುವ ಎಲ್ಲಾ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ರೂ.45,000 ಕೋಟಿಗಳ ಹಣಕಾಸಿನ ಹಾಗೂ 60 ಟಿಎಂಸಿ ನೀರಿನ ಅವಶ್ಯಕತೆ ಇದೆ. ಕರ್ನಾಟಕ ಸರ್ಕಾರವು ಎಲ್ಲ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಬದ್ಧವಾಗಿದ್ದು, ಇದನ್ನು ಸಾಕಾರಗೊಳಿಸಲು ಅನೇಕ ಯೋಜನೆಗಳನ್ನು ಸಹ ರೂಪಿಸಲಾಗಿದೆಯೆಂದು ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿರುವ ಕುಡಿಯುವ ನೀರಿನ ಯೋಜನೆಗಳು ವಿದ್ಯುತ್ ಪೂರೈಕೆ ಮೇಲೆ ಅವಲಂಬಿತವಾಗಿದೆ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಿರುವುದರಿಂದ ಕುಡಿಯುವ ನೀರಿನ ಪೂರೈಕೆಯಲ್ಲಿ ತೊಂದರೆಯಾಗುತ್ತಿದೆ. ಕಾರಣ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಯೋಜನೆಗಳಿಗೆ ಸೋಲಾರ ವಿದ್ಯುತ್ ಅಳವಡಿಸುವ ಅವಶ್ಯಕತೆಯಿದೆ ಎಂದು ಕೇಂದ್ರ ಕುಡಿಯುವ ನೀರು ಪೂರೈಕೆ ಮತ್ತು ನೈರ್ಮಲ್ಯ ಸಚಿವರಿಗೆ ಮನವಿ ಮಾಡಿದ ಶ್ರೀ ಎಚ್.ಕೆ. ಪಾಟೀಲ್ ರವರು ಸೋಲಾರ್ ವ್ಯವಸ್ಥೆ ಪರಿಸರ ಸ್ನೇಹಿ ಮಾತ್ರವಲ್ಲದೆ ಅತ್ಯಂತ ಕಡಿಮೆ ವೆಚ್ಚದ್ದಾಗಿದೆಯೆಂದು ತಿಳಿಸಿದರು.

ಕರ್ನಾಟಕವನ್ನು 2015 ರ ವೇಳೆಗೆ ಬಯಲು ಬಹಿರ್ದೆಶೆ ಮುಕ್ತ ರಾಜ್ಯವನ್ನಾಗಿ ಮಾಡಲು ರಾಜ್ಯ ಸರ್ಕಾರ ಸಂಕಲ್ಪ ಮಾಡಿದ್ದು, ಇದಕ್ಕಾಗಿ ಶೌಚಾಲಯಕ್ಕಾಗಿ ಸಮರವನ್ನು ಘೋಷಿಸಿದೆ. ಈಗಾಗಲೇ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಬಯಲು ಬಹಿರ್ದೆಶೆ ಮುಕ್ತ ಜಿಲ್ಲೆಯನ್ನಾಗಿ ಘೋಷಿಸಲು ಸಿದ್ಧವಾಗಿವೆ. 5 ವರ್ಷಗಳ ಅವಧಿಯಲ್ಲಿ 50 ಲಕ್ಷ ಶೌಚಾಲಯಗಳನ್ನು ನಿರ್ಮಿಸುವ ಬೃಹತ್ ಗುರಿಯನ್ನು ಸರ್ಕಾರ

ಹೊಂದಿದೆ. 2013–14 ರಲ್ಲಿ 5.05 ಲಕ್ಷ ಹಾಗೂ 2014–15 ರಲ್ಲಿ 8.76 ಲಕ್ಷ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ಪ್ರಸಕ್ತ 2015–16 ನೇ ಸಾಲಿನಲ್ಲಿ 10.37 ಲಕ್ಷ ಶೌಚಾಲಯಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಈಗಾಗಲೇ 5.52 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, 4.63 ಲಕ್ಷ ಶೌಚಾಲಯಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 2018 ರ ವೇಳೆಗೆ ಕರ್ನಾಟಕವನ್ನು ಬಯಲು ಬಹಿರ್ದೆಶೆ ಮುಕ್ತ ರಾಜ್ಯವನ್ನಾಗಿಸುವ ಗುರಿಯನ್ನು ಸಾಕಾರಗೊಳಿಸುವಲ್ಲಿ ನಾವು ದೃಢವಾದ ಹೆಜ್ಜೆಯನ್ನು ಇಟ್ಟಿದ್ದೇವೆ.

ಶೌಚಾಲಯದಷ್ಟೇ ಸ್ನಾನಗೃಹಗಳು ಸಹ ಅತ್ಯವಶ್ಯಕವಾಗಿದ್ದು, ಶೌಚಾಲಯದ ಜೊತೆಗೆ ಸ್ನಾನಗೃಹಗಳನ್ನು ನಿರ್ಮಿಸಲು ಕರ್ನಾಟಕದಲ್ಲಿ "ಗ್ರಾಮೀಣ ಗೌರವ" ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಗ್ರಾಮೀಣ ಮಹಿಳೆಯರ ಗೌರವವನ್ನು ರಕ್ಷಿಸಲು ಈ ಯೋಜನೆ ಸಹಕಾರಿಯಾಗಲಿದೆ. ಇಂದು ಮಹಿಳೆಯರು ತಾತ್ಕಾಲಿಕ ಶೆಡ್ಡುಗಳಲ್ಲಿ ಅಥವಾ ಮುಕ್ತ ಸ್ಥಳಗಳಲ್ಲಿ ಸ್ನಾನ ಮಾಡುವುದು ದುರ್ದೈವಕರ ಸಂಗತಿಯಾಗಿದೆ ಎಂದು ಹೇಳಿದ ಅವರು ಗ್ರಾಮೀಣ ಗೌರವ ಯೋಜನೆಗೆ ಕೇಂದ್ರ ಸರ್ಕಾರ ಆರ್ಥಿಕ ನೆರವನ್ನು ಒದಗಿಸುವಂತೆ ಕೋರಿದರು.

ದೈಹಿಕ ವಿಕಲ ಚೇತನರಿಗೆ, ದೃಷ್ಟಿಹೀನರಿಗೆ, ಗರ್ಭಿಣಿ ಮಹಿಳೆಯರು ಮತ್ತು ಹಿರಿಯ ನಾಗರೀಕರಿಗೆ ಅನುಕೂಲವಾಗುವಂತೆ ಶೌಚಾಲಯಗಳಲ್ಲಿ ಕಮೋಡ್ ವ್ಯವಸ್ಥೆಯನ್ನು ಸಹ ಕರ್ನಾಟಕದಲ್ಲಿ ಮಾಡಲಾಗುತ್ತಿದ್ದು, ಸಾಮೂಹಿಕ ನೈರ್ಮಲ್ಯ ಸಂಕೀರ್ಣಗಳಲ್ಲಿ ಕಮೋಡ್ ಜೊತೆಗೆ, ಬಟ್ಟೆ ಒಗೆಯುವ ಯಂತ್ರ ಹಾಗೂ ಇನ್ನಿತರೆ ಆಧುನಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ತಾಜ್ಯ ಮುಕ್ತ ಗ್ರಾಮಗಳನ್ನು ಮಾಡುವ ಉದ್ದೇಶವನ್ನು ಸಹ ಹೊಂದಿದ್ದು, ಇದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿರುವ ತಿಪ್ಪೆಗಳನ್ನು ಸಂಸ್ಕರಣೆ ಮಾಡುವ ಕಾರ್ಯವನ್ನು ಕೈಗೆತ್ತಿಕೊಂಡಿದೆ. ತಿಪ್ಪೆಗಳು ಗ್ರಾಮೀಣ ಜನರ ಬದುಕಿನ ಅವಿಭಾಜ್ಯ ಅಂಗವಾಗಿದೆ. ರೈತರ ಜಮೀನುಗಳಿಗೆ ಉತ್ತಮ ಪೋಷಕಾಂಶ ಒದಗಿಸುವ ಗೊಬ್ಬರದ ಗುಂಡಿಗಳು ಗ್ರಾಮೀಣರ ಪಾಲಿನ ಕಾಮದೇನುವಾಗಿದೆ. ಅವೈಜ್ಞಾನಿಕ ನಿರ್ವಹಣೆಯಿಂದ ಈಗ ಅಸಹ್ಯ ಸ್ಥಳವಾಗಿರುವ ತಿಪ್ಪೆಗುಂಡಿಗಳನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಉತ್ತಮ ಗೊಬ್ಬರ ಪಡೆಯುವಂತೆ ಮಾಡುವುದೇ ಈ ಯೋಜನೆಯ ಉದ್ದೇಶವಾಗಿದೆ. ಗದಗ್ ಜಿಲ್ಲೆಯ ಕನಕಿನಕೊಪ್ಪ ಹಾಗೂ ಕೊಪ್ಪಳ ಜಿಲ್ಲೆಯ ಹಿಟ್ನಾಳ್ ಗ್ರಾಮಗಳನ್ನು ಪ್ರಾಯೋಗಿಕವಾಗಿ ಈ ಯೋಜನೆಗೆ ಆಯ್ಕೆ ಮಾಡಲಾಗಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಈ ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಿಸಲಾಗುವುದೆಂದು ಶ್ರೀ ಎಚ್.ಕೆ. ಪಾಟೀಲ್ ಹೇಳಿದರು.

ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಕರ್ನಾಟಕ ಗ್ರಾಮೀಣ ನೈರ್ಮಲ್ಯ ಸೌಲಭ್ಯಗಳ ಖಾತ್ರಿ ವಿಧೇಯಕವನ್ನು ಮಂಡಿಸಲು ರಾಜ್ಯ ಸರ್ಕಾರ ಉದ್ದೇಶಿಸಿದ್ದು, ಗ್ರಾಮೀಣ ಪ್ರದೇಶದ ಜನರಿಗೆ ಕಾನೂನು ಬದ್ಧವಾಗಿ ನೈರ್ಮಲ್ಯ ಸೌಲಭ್ಯಗಳನ್ನು ಪಡೆಯಲು ಇದರಿಂದ ಅನುಕೂಲವಾಗಲಿದೆ ಎಂದು ಶ್ರೀ ಎಚ್.ಕೆ. ಪಾಟೀಲ್ ರವರು ಹೇಳಿದರು.

ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಕರ್ನಾಟಕ ಸರ್ಕಾರವು ಫಲಪ್ರದಗೊಳಿಸುವ ನಿಟ್ಟಿನಲ್ಲಿ ಮುನ್ನಡೆಸುತ್ತಿದ್ದು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು 2015–16 ನೇ ಸಾಲಿನಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಿದ ಚಿತ್ರದುರ್ಗ ಜಿಲ್ಲೆಯನ್ನು ಗುರುತಿಸಿ ಪ್ರಶಸ್ತಿ ನೀಡಿರುವುದಕ್ಕಾಗಿ ಶ್ರೀ ಎಚ್.ಕೆ. ಪಾಟೀಲ್ ರವರು ಭಾರತ ಸರ್ಕಾರವನ್ನು ಅಭಿನಂದಿಸಿದರು.

ಕರ್ನಾಟಕ ಸರ್ಕಾರವು ನಗರ ಪ್ರದೇಶಗಳಿಂದ ಗ್ರಾಮೀಣ ಪ್ರದೇಶಗಳಿಗೆ ವಲಸೆ ಬರುವ ರೀತಿಯಲ್ಲಿ ಗ್ರಾಮೀಣ ಭಾಗದಲ್ಲಿ ಉತ್ತಮ ಸೌಲಭ್ಯ ಹಾಗೂ ಉದ್ಯೋಗಗಳನ್ನು ಕಲ್ಪಿಸಲು ಹಲವಾರು ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಇದಕ್ಕಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರು ರಾಜ್ಯ ಸರ್ಕಾರದ ಕೈಯನ್ನು ಬಲಪಡಿಸುವಂತೆ ಮನವಿ ಮಾಡಿದ ಅವರು ಗ್ರಾಮೀಣ ಜನರ ಬದುಕನ್ನು ಹಸನಾಗಿಸಲು ಇದು ಸಹಾಯವಾಗುತ್ತದೆ ಎಂದು ತಿಳಿಸಿದರು.

ಬಾಬು:ಜಿಪಿಆರ್.

# Main Story of Invest Karnataka2016 on First day

Centre promises full cooperation to Karnataka in its saga of growth

BENGALURU, FEBRUARY 3:

Karnataka’s ambitious three-day global investors’ summit, Invest Karnataka 2016, got off to a rousing start with the Centre led by Union Finance Minister Arun Jaitelyand the trio of Venkaiah Naidu, Nitin Gadkari and Ananth Kumar promising complete cooperation and a slew of mega investment commitments to the State in the true spirit of cooperative federalism while the captains of industry announcing huge projects to boost the infrastructure.

Jaitely, in his inaugural address after switching on the glittering robot operated display of the diverse facets that have made Karnataka the place where the State’s and the country’s future is made, set the tone and task by strongly underscoring the need for the State to exceed the national growth rate by at least 2 to 3 % if Prime Minister Narendra Modi’s goal of Make in India and Start Up India were to be achieved.

``This is one of the greatest challenges to Karnatakawith its first rate human resource potential and natural resources,'' he said.

Given his pre-occupation with the preparation of the Modi regime's third budget and understandably the need to be reticent, it was left to Union Road Transport and Shipping Minister Nitin Gadkari, Urban Development Minister M Venkaiah Naidu and Union Chemicals and Fertilisers Minister H N Ananth Kumar, who hails from Karnataka, to be more forthcoming to give a big boost for the Invest Karnataka global summit by announcing a series of mega investments for different projects pertaining to their respective departments in the State.

The galaxy of dignitaries on the dais, including the quartet of Union Ministers – Arun Jaitely, Venkaiah Naidu, Nitin Gadkari and Ananth Kumar – as well as the captains of industry and doyens of entrepreneurs ranging from Ratan Tata, Anil Ambani, Sajjan Jindal, Kumar Mangalam Birla, N R Narayana Murthy, Gautam Adani, Kiran Mazumdar Shaw, Uday Kotak and others as well as foreign ambassadors and other dignitaries, showered warm appreciation for the dynamism, visionary and pro-active leadership of Karnataka Chief Minister



Siddaramaiah and Large and Medium Industries Minister R V Deshpande as well as other ministers and bureaucrats of the State.

Responding to the major concern of the industrialists and investors on the need for good infrastructure facilities, Gadkari said his department would be executing projects for expanding the present national highway network of 9,632 kms by another 4,000 kms by spending Rs 60,000 crore by the end of December and another Rs 40,000 crore for the road network next year.

The capacity of the Karnataka's all-weather New Mangalore Port would be doubled at a cost of Rs 10,000 crore taking the total investment by his ministry in the State to Rs 1,10,000 crore, he said.

Urban Development Minister Venkaiah Naidu underscored the need for development and welfare to go hand in hand to ensure the success of Modi's

mantra of ``Sabka Saath, Sabka Vikas,'' and housing for all by 2022 was the Centre's goal.

Naidu helped in elevating the mood of the over 5000 delegates from India and abroad as well as the people of Karnataka by declaring complete support from the Centre for executing the peripheral ring road, suburban railway system and expanding the metro rail network in and around Bengaluru.

Union Chemicals and Fertiliser Minister Ananth Kumar said a State-of-the-art Research and Development (R&D) Centre would be set up in Bengaluru for the establishment of Central Institute of Plastic Technology (CEPT). The National Institute of Pharma Education and Research (NIPER), the second such centre of excellence after the first one in Maharashtra established last year, was also proposed to be set up in Bengaluru.

Kumar said the Centre proposed to set up a mega fertilizer plant in North Karnataka with a capacity of manufacturing 13 lakh tonnes per annum of urea if the State Government provided land.

In his reply to Kumar, the Chief Minister in his presidential address said the State Government had already offered to provide 500 acres of land for setting up the fertilizer plant in any of the four places of Vijayapura, Bagalakote, Dharwad or Raichur in North Karnataka. The Government has also offered 5 acres of land free of cost in the City and financial assistance of Rs 43.5 crore for the proposed SIPET and 100 acres of land for the NIPER either in Mysuru or Mangaluru.

EOM/GV

## CLEAR VISION AND WELL DEFINED ROAD MAP PROPELLING STATE TOWARDS CONTIRUBTING TO INDIA'S GROWTH, SAYS SIDDARAMAIAH

Bengaluru February 3 (Karnataka Information) :

Karnataka Chief Minister Siddaramaiah today affirmed that his government with a clear vision and well defined road map propelled the state towards contributing to India's growth in a significant way.

In his presidential address at the inaugural of the global Investors Meet Invest Karnataka -2016 here he said the state possessed the unbeatable combination of hi technology and an outstanding workforce. The world Economic Forum had recognized Karnataka among the top four innovation hubs in the world and Bengaluru ranked the fourth largest global tech cluster after Silicon Valley, Boston and London. He said Karnataka was a USD 120 billion economy and wanted to ensure that it became a USD 700 billion economy by 2035. If India aspired to grow at the rate of 9 per cent the State wished to grow at the rate of 10 per cent.

He said over the years more than 400 of the biggest fortune companies had made Karnataka their home and continued to invest here. New interests and investments continued to pour in every day, he noted saying that it is also the preferred place for small and medium enterprises and startups.

He said the state's start up policy covered Information technology , Biotechnology and manufacturing sectors. The first start up warehouse set up by the state government in association with NASSCOM had been successful experiment resulting in over 64 startups being incubated. In fact, Bengaluru was the only Indian city to be ranked amongst the 20 start up eco systems in the world, he said quoting the global start up eco system ranking report 2015.

He said the enormous interest and enthusiasm to invest in Karnataka placed immense responsibility and the government was fully prepared to shoulder this responsibility. His government, in the last30 months, had received

Foreign Direct Investment worth USD 5.2 billion . Karnataka is the second highest

FDI received state in India. The government had cleared more than 500 projects worth over USD 20 billion, he added.

He referred to Union Minister for Chemicals and Fertilisers Mr Ananth Kumar plea on his ministry's new initiatives in Karnataka in his address and said the

government had already identified place for starting a fertilizer plant in Bagalkote, Vijayapura, Dharwad and Raichur districts of North Karnataka. It had also identified five acre land for free of cost to establish Central Institute of Plastic technology. The government was also ready to provide 100 acre land either at Mysuru or Mangaluru to set up National Institute of Pharma Education and Research.

Karnataka Major and Medium Industries Minister Mr R V Deshpande, welcoming the dignitaries, said the state's strategy was based upon conducive policies, creating high quality infrastructure, massive investments in human capital fit of the 21$^{st}$ century, consistent and transparent tax policies, responsive administration and globally comparable ease of doing business environment. Karnataka's outstanding talent and workforce had made it the knowledge capital of not only India but also of the world with research and development and innovation centres of more than 400 top fortune 500 companies. " this is perhaps the largest concentration of the high tech workforce anywhere in the world," he felt.

He said the unique feature of Invest Karnataka 2016 was that more than 100 ready projects have been identified for investors to make their investments. Over two days a total of 26 secctors, thematic and country sessions have been organized in which nearly 5000 delegates attend. Of them 50 per cent are SMEs, enrepreneurs including women entrepreneurs, startup and others, he added.

***